ನಮ್ಮ ಸಹಾಯಕ್ಕೆ ಬರಬೇಕಾಗಿತ್ತು. ಅದನ್ನು ಬಿಟ್ಟು, ನೀವು ಯಾವಾಗಲೂ ನಮ್ಮನ್ನು ವಿರೋಧ ಮಾಡುತ್ತಿದ್ದೀರಲ್ಲಾ?

ಶ್ರೀ ಜಗದೀಶ್ ಶೆಟ್ಟರ್:– ಆ ರೀತಿ ಏನೂ ಇಲ್ಲ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೇ, ನಾಳೆ ಬೆಳಿಗ್ಗೆ ನಾನು ಇರುವುದಿಲ್ಲ. ಆದ್ದರಿಂದ ಇವತ್ತೇ ಚರ್ಚೆ ಪ್ರಾರಂಭಿಸುತ್ತೇನೆ. ಇವತ್ತು ಚರ್ಚೆ ಪ್ರಾರಂಭಿಸುವುದು ಬೇಡ ಎನ್ನುವುದಾದರೆ, ನಾನು Monday ಚರ್ಚೆ ಮಾಡಬೇಕಾಗುತ್ತದೆ.

ಶ್ರೀ ಬಸವರಾಜ್ ಬೊಮ್ಮಾಯಿ:– Strategically ಇವತ್ತು ಬೇಡವೆಂದು ನಾನು ಹೇಳುವುದು.

ಅಧ್ಯಕ್ಷರು:– ಆಯಿತು. Monday ಚರ್ಚೆ ಪ್ರಾರಂಭಿಸಿ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, Monday, immediately after question hour ನಾನು ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು:– ಆಯಿತು.

7. ಗಮನ ಸೆಳೆಯುವ ಸೂಚನೆಗಳು

1. ವಿಷಯ: ಬರ ಎದುರಿಸುತ್ತಿರುವ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ಮಹಾರಾಷ್ಟ್ರದ ಕೊಯ್ನಾ ಅಥವಾ ವಾರಣಾ ಜಲಾಶಯದಿಂದ ನೀರು ಬಿಡಿಸುವ ಬಗ್ಗೆ.

ಶ್ರೀ ಶ್ರೀಕಾಂತ್ ಎಸ್. ಕುಲಕರ್ಣಿ (ಜಮಖಂಡಿ):– ಮಾನ್ಯ ಅಧ್ಯಕ್ಷರೆ, ಪದೇ ಪದೇ ಬರ ಎದುರಿಸುತ್ತಿರುವ ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಈ ಬಾರಿ ಕೃಷ್ಣಾ ನದಿಯ ನೀರು ಬಹಳ ಕಡಿಮೆಯಾಗಿದ್ದು, ಪೂರ್ವಯೋಜಿತವಾಗಿ ಮಹಾರಾಷ್ಟ್ರದ ಕೊಯ್ನಾ ಅಥವಾ ವಾರಣಾ ಜಲಾಶಯದಿಂದ ಕನಿಷ್ಠ ಐದು ಡಿ.ಎಂ.ಸಿ ನೀರನ್ನು ಬಿಡಿಸಲು ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಸವರಾಜ್ ಬೊಮ್ಮಾಯಿ (ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ವಿಧಾನ ಸಭಾ ಸದಸ್ಯರು ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಯಲ್ಲಿ ಮಂಡಿಸಿರುವಂತೆ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಪಟ್ಟಣಗಳು ಮತ್ತು ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಆಲಮಟ್ಟಿ ಹಾಗೂ ನಾರಾಯಣಪೂರ ಜಲಾಶಯಗಳಿಂದ ಪೂರೈಸಲಾಗುತ್ತಿದೆ. ಇದಲ್ಲದೆ ಹಿಪ್ಪರಗಿ ಜಲಾಶಯದಿಂದ ಹಾಗೂ ಹಿಡಕಲ್ ಜಲಾಶಯದಿಂದಲೂ ಸಹ ನೀರನ್ನು ಕೃಷ್ಣಾ ನದಿಗೆ ಬಿಡಿಸಿಕೊಂಡು ಸುತ್ತಮುತ್ತಲಿನ ಪಟ್ಟಣಗಳು ಮತ್ತು ಗ್ರಾಮಗಳಲ್ಲಿ ಕುಡಿಯುವ ನೀರನ್ನು ಪೂರೈಸಿಕೊಳ್ಳಲಾಗುತ್ತಿದೆ.

ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಆಲಮಟ್ಟಿ ಹಾಗೂ ನಾರಾಯಣಪೂರ ಅಣೆಕಟ್ಟುಗಳಡಿ ದಿನಾಂಕ 31.01.2012 ರಂತೆ ಜಲಾಶಯದ ನೀರಿನ ಮಟ್ಟ ಹಾಗೂ ಸಂಗ್ರಹಣೆ ಪ್ರಮಾಣದ ವಿವರಗಳು ಈ ಕೆಳಗಿನಂತಿವೆ.

ಅಣೆಕಟ್ಟು	ಎಫ್.ಆರ್. ಎಲ್. ಮಟ್ಟ	ದಿ: 31.01.2012 ರಂದು ಇರುವ ಮಟ್ಟ	ಎಫ್.ಆರ್.ಎಲ್. ಮಟ್ಟಕ್ಕೆ ಇರುವ ನೀರಿನ ಸಂಗ್ರಹಣೆ	ದಿ: 31.01.2012 ರಂದು ಇರುವ ಒಟ್ಟು ನೀರಿನ ಸಂಗ್ರಹಣೆ (Gross Storage)	ದಿ: 31.01.2012 ರಂದು ಇರುವ ಜೀವಪಲ ಸಂಗ್ರಹಣೆ (Live Storage)
ಆಲಮಟ್ಟಿ	RL 519.60	RL 512.23	123.08 TMC	42.354 TMC	24.734 TMC
ನಾರಾಯಣಪೂರ	RL 492.25	RL 491.09	33.312 TMC	28.208 TMC	13.448 TMC

ದಿನಾಂಕ 03.12.2011 ರಂದು ಜರುಗಿದ ಕೃಷ್ಣಾ ಮೇಲ್ದಂಡೆ ಯೋಜನೆ ಹಿಂಗಾರು ಹಂಗಾಮಿ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ನೀರಾವರಿಗಾಗಿ ಮತ್ತು ಮುಂಬರುವ ದಿನಗಳಲ್ಲಿ ಅವಶ್ಯಕವಿರುವ ಕುಡಿಯುವ ನೀರಿನ ಉದ್ದೇಶಕ್ಕಾಗಿ ಬೇಕಾಗುವ ನೀರಿನ ಪ್ರಮಾಣ, ಭಾಷ್ಪೀಕರಣ ಮುಂತಾದವುಗಳನ್ನು ಗಮನದಲ್ಲಿಟ್ಟುಕೊಂಡು ದಿನಾಂಕ

25.02.2012 ರವರೆಗೆ ಮಾತ್ರ ನೀರಾವರಿಗಾಗಿ ಕಾಲುವೆ ಜಾಲದಡಿ ನೀರು ಹರಿಸಲು ನಿರ್ಧರಿಸಲಾಗಿರುತ್ತದೆ.

ಎರಡೂ ಜಲಾಶಯಗಳಡಿ ಎಂ.ಡಿ.ಡಿ.ಎಲ್ ಮಟ್ಟ, ಅಂದರೆ ಆಲಮಟ್ಟಿ ಜಲಾಶಯದ ಎಂ.ಡಿ.ಡಿ.ಎಲ್ ಮಟ್ಟ ಆರ್.ಎಲ್. 506.087 ಮೀ. ಆಗಿದ್ದು ಮತ್ತು ನಾರಾಯಣಪೂರ ಜಲಾಶಯದ ಎಂ.ಡಿ.ಡಿ.ಎಲ್ ಮಟ್ಟ ಆರ್.ಎಲ್ 487.10 ಮೀ. ಆಗಿದ್ದು, ಈ ಮಟ್ಟಕ್ಕೆ ಲಭ್ಯವಿರುವ ನೀರನ್ನು ಮುಂಬರುವ ದಿನಗಳಲ್ಲಿ ಜೂನ್ ತಿಂಗಳ ಅಂತ್ಯದವರೆಗೆ ಕುಡಿಯುವ ನೀರಿನ ಬಳಕೆಗಾಗಿ ಕಾಯ್ದಿರಿಸಿಕೊಳ್ಳಲಾಗುತ್ತದೆ.

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಹಿಪ್ಪರಗಿ ಹತ್ತಿರ ಕೃಷ್ಣಾ ನದಿಗೆ ಅಡ್ಡಲಾಗಿ ಹಿಪ್ಪರಗಿ ಬ್ಯಾರೇಜನ್ನು ನಿರ್ಮಿಸಲಾಗಿದೆ. ಹಿಪ್ಪರಗಿ ಬ್ಯಾರೇಜಿನ ಗೇಟುಗಳನ್ನು ಸನ್ 2004 ರಲ್ಲಿ ಅಳವಡಿಸಲಾಗಿದ್ದು, ಕ್ರೇಸ್ಟ್‌ಲೆವಲ್ 516.64 ಇದ್ದು, ಎಫ್‌ಆರ್‌ಎಲ್ 524.87 ಮೀ. ಇದ್ದು, 2004 ರಿಂದ ಇಲ್ಲಿಯವರೆಗೆ ನೀರಿನ ಸಂಗ್ರಹಣೆ ಮಾಡಲಾಗುತ್ತಿದೆ. ದಿನಾಂಕ 31.01.2012 ರಂದು ಜಲಾಶಯದ ನೀರಿನ ಮಟ್ಟ 523.80 ಮೀ. ಇದ್ದು, 4.22 ಟಿ.ಎಂ.ಸಿ ಉಪಯುಕ್ತ ಜಲರಾಶಿ ಲಭ್ಯವಿರುವುದು.

ಆಲಮಟ್ಟಿ ಮತ್ತು ನಾರಾಯಣಪೂರ ಹಾಗೂ ಹಿಪ್ಪರಗಿ ಜಲಾಶಯಗಳಲ್ಲಿ ಲಭ್ಯವಿರುವ ನೀರನ್ನು ಮುಂದಿನ ತಿಂಗಳುಗಳಲ್ಲಿ ಸಮರ್ಪಕ ನಿರ್ವಹಣೆಯೊಂದಿಗೆ ಕುಡಿಯುವ ನೀರಿನ ಬೇಡಿಕೆಯನ್ನು ಪೂರೈಸಲು ಕ್ರಮ ಜರುಗಿಸಲಾಗುತ್ತದೆ. ಆದುದರಿಂದ ಮಹಾರಾಷ್ಟ್ರದಿಂದ ನೀರನ್ನು ಬಿಡಿಸಿಕೊಳ್ಳುವ ಅವಶ್ಯಕತೆ ಇರುವುದಿಲ್ಲ.

ಅಧ್ಯಕ್ಷರು:– ಮಾನ್ಯ ಸದಸ್ಯರು clarification ಏನಾದರೂ ಕೇಳುವುದಿದ್ದರೆ ಕೇಳಿ.

ಶ್ರೀ ಶ್ರೀಕಾಂತ್ ಎಸ್. ಕುಲಕರ್ಣಿ:– ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆ. ಕುಡಿಯುವ ನೀರಿಗೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ ಎನ್ನುವ ಭರವಸೆಯನ್ನು ಅವರು ಕೊಟ್ಟಿದ್ದಾರೆ. ಅದು ನಮಗೆ ಸಮಾಧಾನ ತರುತ್ತದೆ. ಆದರೆ, ಹಿಂದೆ

ಹತ್ತಾರು ಬಾರಿ ಕೃಷ್ಣಾ ನದಿ ಒಣಗಿದಾಗ, ಬರಗಾಲ ಬಂದಾಗ, ನಮ್ಮ ಹಿಂದಿನ ಕಹಿ ಅನುಭವವೇನೆಂದರೆ, ಸಂಪೂರ್ಣ ನದಿ ಬತ್ತಿದ ಮೇಲೆ, ಮಹಾರಾಷ್ಟ್ರ ಅಥವಾ ಬೇರೆ ಕಡೆಯಿಂದ ನೀರು ತರುವಂತಹ ಪ್ರಯತ್ನ ಆಗುವುದಾದರೆ, ಬಹುಶಃ ನಮಗೆ ಬೇಕಾಗುವಂತಹ ಸಂದರ್ಭದಲ್ಲಿ ನೀರು ಸಿಗುವುದಿಲ್ಲ. ಈ ವರ್ಷದ ಮುಂಬರುವ ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳು, ಅನೇಕರು ಕೊಟ್ಟಿರುವಂತಹ ಅಭಿಪ್ರಾಯದ ಪ್ರಕಾರ, ವಿಶೇಷವಾಗಿ 155 ವರ್ಷಗಳ ಹಿಂದೆ ಯಾವ ರೀತಿಯ ಪ್ರಖರವಾದ ಬಿಸಿಲಿತ್ತೋ, ಆ ತರದಹ ಬಿಸಿಲು ಇನ್ನೊಮ್ಮೆ ಈ ವರ್ಷ ಬರುತ್ತದೆ ಎನ್ನುವಂತಹ ಊಹೆ ಇರುವುದರಿಂದ, ಸಂಪೂರ್ಣವಾಗಿ ನದಿ ಬತ್ತುವಂತಹ ಸಂಭವವಿದೆ. ಹೀಗಾಗಿ...

ಅಧ್ಯಕ್ಷರು:– Clarification ಕೇಳಿ ಎಂದರೆ ಮತ್ತೆ ಅದನ್ನೇ ಹೇಳುತ್ತಿದ್ದೀರಲ್ಲಾ?

ಶ್ರೀ ಶ್ರೀಕಾಂತ್ ಎಸ್. ಕುಲಕರ್ಣಿ:– ಮಾನ್ಯ ಅಧ್ಯಕ್ಷರೆ, ಅದನ್ನೇ ಕೇಳುತ್ತಿದ್ದೇನೆ. ನದಿ ಬತ್ತಿದ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕಿಂತ ಮೊದಲೇ, ಪೂರ್ವನಿಯೋಜಿತವಾಗಿ ಸರ್ಕಾರದವರು ಮಹಾರಾಷ್ಟ್ರ ಸರ್ಕಾರದೊಂದಿಗೆ ಸಂಪರ್ಕಿಸಿ, 4–5 ಟಿ.ಎಂ.ಸಿ.ಗೆ ಕೊಡಬೇಕಾಗಿರುವಂತಹ ಆರ್ಥಿಕ ವ್ಯವಸ್ಥೆಯನ್ನು ಮಾಡಿಕೊಂಡು, ನೀರು ಬಿಡಿಸುವಂತಹ ಪ್ರಯತ್ನ ಮಾಡಬೇಕೆಂದು ಮಾನ್ಯ ಸಚಿವರನ್ನು ಕೋರುತ್ತೇನೆ.

ಅಧ್ಯಕ್ಷರು:– ಅವರು ಕೇಳಿದ್ದಕ್ಕೆ clarification ಕೊಡಿ.

ಶ್ರೀ ಬಸವರಾಜ್ ಬೊಮ್ಮಾಯಿ:– ಮಾನ್ಯ ಅಧ್ಯಕ್ಷರೆ, ಇದರಲ್ಲಿ ನಾನು ಕೊಡುವ clarifiction ಇಷ್ಟೇ. ಈಗಿರುವಂತಹ ನಮ್ಮ ಜಲಾಶಯಗಳ ನೀರಿನ ಮಟ್ಟ, ಅವರೇನು ಹಿಂದೆ ಭೀಕರ ಬರಗಾಲ ಬಂದಿತ್ತು ಎಂದು ಹೇಳುತ್ತಿದ್ದಾರೋ, ಅಷ್ಟೊಂದು ಆತಂಕಕಾರಿಯಾಗಿಲ್ಲ. ನಮ್ಮ ಎಂ.ಡಿ.ಡಿ.ಎಲ್ ಮಟ್ಟ ಈಗಿರುವುದು ಜೂನ್ ತಿಂಗಳ ಅಂತ್ಯದವರೆಗೂ ನಾವು ಕುಡಿಯುವ ನೀರನ್ನು ಕೊಡಬಹುದು ಎಂದು ನಮಗೆ ಗೊತ್ತಿದೆ. ಆ ಹಿನ್ನೆಲೆಯಲ್ಲಿ ಸದ್ಯಕ್ಕೆ ಆ ಒಂದು ಪ್ರಸ್ತಾವನೆ ನಮ್ಮ

ಮುಂದಿಲ್ಲ. ಆದರೆ ಆ ಸಮಯಕ್ಕೆ ಏನಾದರೂ ಅವಶ್ಯಕತೆ ಇದ್ದಾಗ, ಆ ಸಂದರ್ಭದಲ್ಲಿ ಸೂಕ್ತವಾದಂತಹ ಕ್ರಮವನ್ನು ನಾವು ಜರುಗಿಸುತ್ತೇವೆ.

ಅಧ್ಯಕ್ಷರು:– ಆಯಿತು.

2. ವಿಷಯ: ಗುಲ್ಬರ್ಗಾ ತಾಲ್ಲೂಕಿನ ಫರ್ತಾಬಾದ್ ವಲಯದ ವ್ಯಾಪ್ತಿಯಲ್ಲಿ ಬರುವ ಕಿರಣಗಿ ಗ್ರಾಮಕ್ಕೆ ಜಲ ನಿರ್ಮಲ ಯೋಜನೆಯಡಿ ಭೀಮಾ ನದಿಯಿಂದ ನೀರು ಸರಬರಾಜಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡುವ ಬಗ್ಗೆ.

ಶ್ರೀ ಮಾಲೀಕಯ್ಯ ಗುತ್ತೇದಾರ:– ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ತಾಲ್ಲೂಕಿನ ಫರ್ತಾಬಾದ್ ವಲಯದ ವ್ಯಾಪ್ತಿಯಲ್ಲಿ ಬರುವ ಕಿರಣಗಿ ಗ್ರಾಮಕ್ಕೆ 8 ಕಿ.ಮೀ ದಿಂದ ಭೀಮಾ ನದಿಯಿಂದ ನೀರನ್ನು ಒದಗಿಸಲಾಗುತ್ತಿದ್ದು, ವಿದ್ಯುತ್ತಿನ ಪೂರೈಕೆಯು ಸಮರ್ಪಕವಾಗಿ ಇಲ್ಲದಿರುವುದರಿಂದ ಸಾರ್ವಜನಿಕರು ಕುಡಿಯುವ ನೀರಿಗಾಗಿ ಗಂಭೀರ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಈ ಗ್ರಾಮಕ್ಕೆ ಶಾಶ್ವತವಾಗಿ 24 ಗಂಟೆಗಳ ಕಾಲ ನಿರಂತರ ವಿದ್ಯುತ್ ಪೂರೈಕೆ ಕುಡಿಯುವ ನೀರನ್ನು ಒದಗಿಸುವ ವಿಷಯವಾಗಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):– ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯ ಗುಲ್ಬರ್ಗಾ ತಾಲ್ಲೂಕಿನ ಫರ್ತಾಬಾದ್ ವಲಯದ ವ್ಯಾಪ್ತಿಯಲ್ಲಿ ಬರುವ ಕಿರಣಗಿ ಗ್ರಾಮಕ್ಕೆ ಜಲನಿರ್ಮಲ ಯೋಜನೆಯಡಿ ಭೀಮಾ ನದಿಯಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ವಿದ್ಯುತ್ತಿನ ಪೂರೈಕೆಯು ಸಮರ್ಪಕವಾಗಿ ಆಗುತ್ತಿಲ್ಲವಾದುದರಿಂದ ಕುಡಿಯುವ ನೀರಿನ ಸಮಸ್ಯೆ ಉಂಟಾಗುತ್ತಿದೆ. ಹೀಗಾಗಿ 24 ಗಂಟೆಗಳ ಕಾಲ ನಿರಂತರ ವಿದ್ಯುತ್ ಪೂರೈಕೆಗಾಗಿ "EXPRESS FEEDER LINE" ಅಂದಾಜು ಪಟ್ಟಿ GESCOMರವರಿಂದ ರೂ. 30.00 ಲಕ್ಷಗಳಿಗೆ ತಯಾರಿಸಲಾಗಿದೆ. ಇದಕ್ಕೆ